ಕಾರಾಗೃಹ ಸಿಬ್ಬಂದಿ ವೇತನದ ತಾರತಮ್ಯ

೪೦೪೨. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೬ರಿಂದಲೂ ಪೊಲೀಸ್ ಸಿಬ್ಬಂದಿ ಹಾಗೂ ಕಾರಾಗೃಹ ಸಿಬ್ಬಂದಿಗಳ ವೇತನ ತಾರತಮ್ಯದ ವಿವರ ಸರ್ಕಾರದ ಮುಂದಿದ್ದು ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಆ) ಕಾರಾಗೃಹ ಸಿಬ್ಬಂದಿಗೆ ಹಾಗೂ ಪೊಲೀಸ್ ಸಿಬ್ಬಂದಿಗೆ ಪರಿಷ್ಕೃತ ವೇತನವನ್ನು ನೀಡಿದಲ್ಲಿ ಸರ್ಕಾರದವರಿಗೆ ಒಟ್ಟು ತಗಲುವ ವೆಚ್ಚವೆಷ್ಟು ?

ಇ) ಈ ಬಗ್ಗೆ ರಚಿಸಲಾಗಿದ್ದ ಕಾರಾಗೃಹ ಸುಧಾರಣಾ ಸಮಿತಿಯು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿಲ್ಲವೆ ? ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಮತ್ತು ಆ) ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ಕಾಲಕಾಲಕ್ಕೆ ಸರ್ಕಾರದ ವಿವಿಧ ವರ್ಗ ಮತ್ತು ಇಲಾಖೆಗಳ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗುತ್ತದೆ. ಪೊಲೀಸ್ ದಳವು ಒಂದು ಪ್ರತ್ಯೇಕ ಹಾಗೂ ವೈಶಿಷ್ಟ್ಯವಾದ ಇಲಾಖೆಯಾಗಿದ್ದು ೧೯೭೬ರ ನಂತರದ ವೇತನ ವಿಯೋಗಗಳು ಕಾರಾಗೃಹ ಇಲಾಖೆಗಿಂತ ವಿಭಿನ್ನವಾದ ಪ್ರತಿಯೊಂದು ವರ್ಗಕ್ಕೂ ಬೇರೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ಶಿಫಾರಸ್ಸು ಮಾಡಿರುತ್ತೇವೆ. ಆದುದರಿಂದ ಕಾರಾಗೃಹ ಇಲಾಖೆಗಳ ಸಿಬ್ಬಂದಿ ಹಾಗೂ ಪೊಲೀಸ್ ಇಲಾಖೆಗಳ ಸಿಬ್ಬಂದಿ ನಡುವಣ ವೇತನ ಶ್ರೇಣಿಗಳನ್ನು ಸಾಮ್ಯ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಾಜ್ಯ ಸರ್ಕಾರವು ಇಂತಹ ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲ.

ರಾಜ್ಯದಲ್ಲಿ ಸಂದರ್ಶನಗಳು ನಡೆದೂ ನೇಮಕಾತಿ ಆಗದಿರುವ ಬಗ್ಗೆ

೫೦೯೭. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಂದರ್ಶನಗಳು ನಡೆದು ಇದುವರೆಗೂ ನೇಮಕಾತಿ ಆಗದಿರುವ ಸರಕಾರಿ ಹುದ್ದೆಗಳು ಯಾವುವು ? ಎಂದಿನಿಂದ ಖಾಲಿ ಇದೆ (ಇಲಾಖಾವಾರು ವಿವರಗಳನ್ನೂ ನೀಡುವುದು).

ಆ) ಈ ಹುದ್ದೆಗಳನ್ನು ನೇಮಕಾತಿ ಮಾಡಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಯವರು).—

ಅ) ಮತ್ತು ಆ) ಈಗ ಲಭ್ಯವಿರುವ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕೊಡಲಾಗಿದೆ